

# ಅಡಿಕೆ ಹಾಳೆಯ ಉಬ್ಬು ಶಿಲ್ಪ





ಭಟ್ಕಳದ ಎಂ.ಡಿ.ಮ್ಯಾಥ್ಯೂ ಅಡಿಕೆಯ ಹಾಳೆಗೆ ಅಂದವರ್ಧನೆ ಮಾಡಿದ್ದಾರೆ. ಬಹುಶಃ ಹಾಳೆಯ ಉಬ್ಬು ಕಲಾಕೃತಿಯೊಂದು ಮಾರುಕಟ್ಟೆ ಪ್ರವೇಶಿಸುವುದು ಇದೇ ಮೊದಲು. ಗಣೇಶ, ಯಕ್ಷಗಾನ, ಕಥಕ್ಕಳಿ ವಿನ್ಯಾಸಗಳು ಹೆಚ್ಚು ಗಮನ ಸೆಳೆಯುತ್ತವೆ.

ಹಾಳೆಗೆ ಉಬ್ಬು ಬರಿಸುವುದು ಯಂತ್ರದ ಮೂಲಕ. ಲೋಹದ ಪಡಿಯಚ್ಚನ್ನು ಮಾಡಿಕೊಂಡಿದ್ದಾರೆ. ಇದಕ್ಕೆ ಸಾವಿರಾರು ರೂಪಾಯಿ ವೆಚ್ಚವಾಗಿದೆ. ನಿಗದಿತ ಪ್ರಮಾಣದ ಶಾಖ ಕೊಟ್ಟು ಹಾಳೆಯನ್ನು ಒತ್ತು ಯಂತ್ರದ ಮುಲಕ ಪಡಿಯಚ್ಚಿನ ಮೇಲೆ ಒತ್ತಿದಾಗ ಕಲಾಕೃತಿ ಸಿದ್ಧ. ಬಣ್ಣ ಬದಲಾಗದಂತೆ, ಫಂಗಸ್ ಬೆಳೆಯದಂತೆ ಇರಲು ಆರೈಕೆ.

ಗ್ರಾಹಕರು ಇಷ್ಟಪಟ್ಟರೆ ಇಂತಹ ಹಲವರು ಶಿಲ್ಪಗಳನ್ನು ತಯಾರಿಸಬಹುದು ಎನ್ನುತ್ತಾರೆ ಮ್ಯಾಥ್ಯೂ. ಗಣಪನ ಉಬ್ಬು ಶಿಲ್ಪಕ್ಕೆ ಬಣ್ಣ ಬಣ್ಣದ ಬಟ್ಟೆಯ ಚೂರು, ಮಣಿಗಳನ್ನು ಸೇರಿಸಿ ಅಂಟಿಸಿದರೆ ಅಂದ. ಅಲಂಕಾರ ರಹಿತನಾದ ಗಣಪ ಇನ್ನೂ ಸುಂದರ.

ಮ್ಯಾಥ್ಯೂ ಅವರು ಹಿಂದೆ ಲಾವಂಚದಿಂದ ನೂರಾರು ಕಲಾಕೃತಿಗಳನ್ನು ಮಾಡಿದ್ದರು. ಮಾರುಕಟ್ಟೆಯಲ್ಲಿ 'ಕ್ಲಿಕ್' ಆಯಿತು. ಜನ ಸ್ವೀಕಾರ ಮಾಡಿದ್ದರಿಂದ ಪ್ರವಾಸಿ ತಾಣಗಳಲ್ಲಿ ಬೇಡಿಕೆ ಹೆಚ್ಚಾಯಿತು. 'ಜತೆಗೆ ಇದನ್ನು ನಕಲು ಮಾಡುವವರ ಸಂಖ್ಯೆಯೂ ಬೆಳೆಯಿತು' ಎಂದು ನಗುತ್ತಾರೆ ಅವರು.

ಸಮಾರಂಭಗಳಲ್ಲಿ ಸ್ಮರಣಿಕೆಯಾಗಿ ನೀಡಲು ಹಾಳೆಯ ಉಬ್ಬುಶಿಲ್ಪ ಹೇಳಿ ಮಾಡಿಸಿದ್ದು. ಅಡಿಕೆ ಸಂಸ್ಥೆಗಳು, ಉದ್ದಿಮೆಗಳು ಇಂತಹ ಕಲಾಕೃತಿಗಳಿಗೆ ಪ್ರೋತ್ಸಾಹ ನೀಡಬಹುದು. ತಮ್ಮಲ್ಲಿಗೆ ಬರುವ ಅತಿಥಿಗಳಿಗೆ ಸ್ಮರಣಿಕೆಯನ್ನು ನೀಡುವ ಮೂಲಕ ಮ್ಯಾಥ್ಯೂ ಅವರನ್ನು ಉತ್ತೇಜಿಸಬಹುದು. ಮ್ಯಾಥ್ಯೂ ಅವರ ಉಶಿರ ಇಂಡಸ್ಟ್ರೀಸ್ ಉದ್ಯಮಕ್ಕೆ ಈಗ ಬೆಳ್ಳಿಯ ಸಂಭ್ರಮ. ಅಡಿಕೆಯ ಉಬ್ಬು ಕಲಾಕೃತಿ ರಜತದ ಕೊಡುಗೆ. (ಸಂಪರ್ಕಕ್ಕೆ 08385-260745)

■ ಚಿತ್ರ- ಬರಹ: ನಾ.ಕಾರಂತ ಪೆರಾಜೆ